**ಓ.ಎಸ್. ನಂ. 248/2023**
**ಪಿ.ಡಬ್ಲ್ಯೂ -1**

**(ಇಂದು ದಿನಾಂಕಃ 23-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ. ಎಂ.ಡಿ.ಪಿ. ವಕೀಲರಿಂದಃ**

ನಾನು ಬಿ.ಎ. ಬಿ.ಇಡಿ. ಓದಿದ್ದೇನೆ. ನಾನು ಶಿಕ್ಷಕನಾಗಿದ್ದೆನೆ. ನನಗೆ ಕನ್ನಡ ಹಾಗೂ ಆಂಗ್ಲ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ. ವಾದ ಪತ್ರವನ್ನು ಸಲ್ಲಿಸಲು ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ. ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯನ್ನು ಓದಿ ತಿಳಿದುಕೊಂಡು ಸಹಿ ಹಾಕಿದ್ದೇನೆ.

1 ರಿಂದ 3 ನೇ ಪ್ರತಿವಾದಿ ರವರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲಾ ಹಾಗೂ ನನ್ನ ವಕೀಲರ ಮುಖಾಂತರವು ಕೇಳಿ ತಿಳಿದುಕೊಂಡಿಲ್ಲಾ. ದಾವಾ ಆಸ್ತಿ ಸರ್ವೆ ನಂ. 100/1/6 ಈ ಆಸ್ತಿಯು ಜಮೀನು ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ನಾನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ಪರಿಶೀಲಿಸಿ ಖರೀದಿಸಿದ್ದೇನೆ. ನಾನು ಉತಾರ, ಇ.ಸಿ. ದಾಖಲೆಗಳನ್ನು ನೋಡಿ ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ. ಉತಾರ ಹಾಗೂ ಇ.ಸಿ. ದಾಖಲೆಯನ್ನು ಹೊರತುಪಡಿಸಿ ಇನ್ನುಳಿದ ದಾಖಲೆ ನೋಡಿರುವುದಿಲ್ಲಾ.

ನಿಪಿ-16 ರಲ್ಲಿ ದಾವಾ ಆಸ್ತಿಗೆ ಸಂಬಂಧಿಸಿ ವಿಸ್ತೀರ್ಣ (ಉದ್ದ x ಅಗಲ)ಳಿ ನಮೂದು ಇರುವುದಿಲ್ಲಾ ಎಂದರೆ ಸರಿ. ಸಾಕ್ಷಿ ಮುಂದುವರೆದು 2 ಗುಂಟೆ 08 ಅಣೆ ಜಮೀನು ಮಾತ್ರ ಖರೀದಿಸಿದ್ದೇನೆ ಎನ್ನುತ್ತಾರೆ. ಒಟ್ಟು 24 ಗುಂಟೆ 08 ಅಣೆ ಜಮೀನಿನ ಪೈಕಿ ನಾನು ಖರೀದಿಸಿದ ದಾವಾ ಆಸ್ತಿಯು ಕೇವಲ 02 ಗುಂಟೆ 08 ಅಣೆ ಇರುತ್ತದೆ.

ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಹಾಗೂ ಖರೀದಿಸಿದ ನಂತರ ಸರ್ವೆ ಇಲಾಖೆಯವರಿಂದ ಮೋಜ ಮಾಪನ (ಅಳತೆ) ಮಾಡಿಸಿರುವುದಿಲ್ಲಾ. ಸಾಕ್ಷಿಯು

ಮುಂದುವರೆದು ಖಾಸಗಿ ವ್ಯಕ್ತಿಯವರಿಂದ ಅಳತೆ ಮಾಡಿಸಿದ್ದೇನೆ ಎನ್ನುತ್ತಾರೆ ಮುಂದುವರೆದು ಮಾಲೀಕರು ಅಳತೆ ಮಾಡಿಸಿದ್ದರು ಎನ್ನುತ್ತಾರೆ. ದಾವಾ ಆಸ್ತಿಯನ್ನು ಯಾವ ಖಾಸಗಿ ವ್ಯಕ್ತಿಯು ಅಳತೆ ಮಾಡಿದ್ದಾರೆ ಎಂದು ಹೆಸರು ಹೇಳಲು ಬರುವುದಿಲ್ಲಾ. ಸರ್ವೆ ಇಲಾಖೆಯವರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಹದ್ದುಬಸ್ತು ಕುರಿತು ಅರ್ಜಿಯನ್ನು ಸಲ್ಲಿಸಿರುವದಿಲ್ಲಾ ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಮೊದಲಿನ ಮಾಲೀಕರು ಅಳತೆ ಮಾಡಿಸಿಕೊಟ್ಟಿರುತ್ತಾರೆ ಎನ್ನುತ್ತಾರೆ.

ನಾನು ಖರೀದಿಸಿದ ದಾವಾ ಆಸ್ತಿಯ ಮೊದಲಿನ ಮಾಲೀಕರು ದಾವಾ ಆಸ್ತಿಯನ್ನು ಸರ್ವೆ ಇಲಾಖೆಯವರಿಂದ ಅಳತೆ ಮಾಡಿಸಿಲ್ಲಾ ಎಂದರೆ ನನ್ನ ಗೊತ್ತಿಲ್ಲ. ದಾವಾ ಆಸ್ತಿಯು NA, KJP, Town planing ರವರಿಂದ ಅನುಮೋದನೆ ಪಡೆದಿಲ್ಲಾ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ದಾವಾ ಆಸ್ತಿಯನ್ನು ಹೈನುಗಾರಿಕೆ ಮಾಡುವ ಉದ್ದೇಶದಿಂದ ಖರೀದಿಸಿದ್ದೇನೆ. 2004 ರಿಂದ ಇಲ್ಲಿಯವರೆಗೆ ಹೈನುಗಾರಿಕೆ ಮಾಡಿರುವುದಿಲ್ಲಾ ನಿವೃತ್ತಿಯಾದ ನಂತರ ಮಾಡುತ್ತೇನೆ ಎನ್ನುತ್ತಾರೆ. ಈ ರೀತಿಯಾಗಿ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ದಾವಾ ಆಸ್ತಿಯ ಉದ್ದ ಅಗಲ ದ ವಿಸ್ತೀರ್ಣ ನಮೂದು ಇಲ್ಲಾ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2 ಗುಂಟೆ 08 ಅಣೆ ಇದ್ದ ಬಗ್ಗೆ ನಮೂದು ಇದೆ ಎನ್ನುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಸದರಿ ಆಸ್ತಿ ಧೂಪದಾಳ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿದ್ದು ಈಗ ಘಟಪ್ರಭಾ ಪುರಸಭೆ ವ್ಯಾಪ್ತಿಯಲ್ಲಿರುತ್ತದೆ. ದಾವಾ ಆಸ್ತಿಯ ಸುತ್ತಲೂ ಕಂಪೌಂಡ ಗೋಡೆ ಕಟ್ಟಿಕೊಳ್ಳಲು ಪುರಸಭೆಯಿಂದ ಯಾವದೇ ಪರವಾನಿಗೆ ಪಡೆದುಕೊಂಡಿರುವುದಿಲ್ಲಾ.

ಘಟಪ್ರಭಾ ಪುರಸಭೆಯಲ್ಲಿ ಜೂನಿಯರ್ ಸಿವಿಲ್ ಇಂಜಿನಿಯರ್ ಹುದ್ದೆ ಇದೆ

ಎಂದರೆ ಸರಿ. ಸದರಿ ಜೂನಿಯರ್ ಸಿವಿಲ್ ಇಂಜಿನಿಯರ್ ರವರಿಗೆ ದಾವಾ ಜಮೀನನ್ನು ಅಳತೆ ಮಾಡಿಕೊಡುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ಸಾಕ್ಷಿಯು ಪುರಸಭೆಯ ಮುಖ್ಯ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಸದರಿ ಪುರಸಭೆ ಮುಖ್ಯ ಅಧಿಕಾರಿಯವರಿಗೆ ಅಳತೆ ಸಲುವಾಗಿ ಅರ್ಜಿ ಸಲ್ಲಿಸಿಲ್ಲಾ ಎಂದರೆ ಸರಿಯಲ್ಲ.

ವಾದ ಪತ್ರದ ಜೊತೆಗೆ ಲಗತ್ತಿಸಿದ ಹಾತ ನಕಾಶೆಯಲ್ಲಿ ದಾವಾ ಆಸ್ತಿಯ ಉದ್ದ ಅಗಲ ದ ವಿಸ್ತೀರ್ಣ ಬರೆಯಿಸಿಲ್ಲಾ ಎಂದರೆ ಸರಿ. ಸದರಿ ಈ ದಾವೆಯಲ್ಲಿ ಸಲ್ಲಿಸಿದ ಹಾತ ನಕಾಶೆಯು ಯಾವದೇ ಗ್ರಾಮ ನಕ್ಷೆ ಹಾಗೂ ಸರ್ವೆ ಇಲಾಖೆಯ ನಕ್ಷೆಯನ್ನು ನೋಡಿಕೊಂಡು ಸಲ್ಲಿಸಿಲ್ಲಾ ಎಂದರೆ ಸಾಕ್ಷಿಯು ಉತಾರ ದಾಖಲೆಯ ಆಧಾರದ ಮೇಲೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಸದರಿ ಹಾತ ನಕಾಶೆಯನ್ನು ಈ ದಾವೆಗೆ ಅನುಕೂಲವಾಗಲೇಂದು ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.1 ರಿಂದ 3 ರವರಿಗೆ ಸಂಬಂಧಿಸಿದ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲಾ. 2 ಪೂಟ ಉದ್ದ 15 ಪೂಟ ಅಗಲವುಳ್ಳ ಗೋಡೆ ಹಾಗೂ ಮೂರು ಕಿಟಕಿಗಳು ಮತ್ತು ಮೊರಿ ಇವೆಲ್ಲವೂ 3 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಯಲ್ಲಿ ಇವೆ ಎಂದರೆ ಸರಿ ಸಾಕ್ಷಿಯು ಮುಂದುವರೆದು 3 ನೇ ಪ್ರತಿವಾದಿಯವರ ಮನೆಯ ಮೊರಿ ನೀರು ನನ್ನ ಆಸ್ತಿಯಲ್ಲಿ ಬರುತಿದೆ ಎನ್ನುತ್ತಾರೆ. 1 ರಿಂದ 3 ನೇ ಪ್ರತಿವಾದಿಯರವರು ಅತೀಕ್ರಮಣ ಮಾಡಿದ್ದಾರೆ ಎಂದು ನನ್ನ ಮೌಖಿಕ ಹೇಳಿಕೆಯನ್ನು ಹೊರತುಪಡಿಸಿ ಯಾವ ದಾಖಲೆಯು ಸಲ್ಲಿಸಿಲ್ಲಾ ಎಂದರೆ ಸಾಕ್ಷಿ ಪೋಟೋಗಳನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ.

**<u>ಓ.ಎಸ್. ನಂ. 248/2023</u>**
**<u>ಪಿ.ಡಬ್ಲ್ಯೂ -1</u>**

ನನ್ನ ಹಾಗೂ 1 ರಿಂದ 3 ನೇ ಪ್ರತಿವಾದಿ ರವರ ಆಸ್ತಿಗಳ ಮದ್ಯ ಬಂಗಿಬೋಳ ಇದೆ ಎಂದು ತೋರಿಸಲು ದಾಖಲೆಯನ್ನು ಪುರಸಭೆಯವರಿಗೆ ಸಲ್ಲಿಸಿದ್ದೆನೆ ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಿ ಮುಂದೂಡಲಾಯಿತು .

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

Sd/-

Addl. CJ & JMFC, Gokak